## ತಿಳಿದಿರಲೇಬೇಕಾದ ಮಾಹಿತಿ



- ನ್ಯಾನೋ ಡ್ರೋನ್‌ಗಳನ್ನು ಹೊರತುಪಡಿಸಿ ಇತರ ಎಲ್ಲ ಡ್ರೋನ್‌ಗಳನ್ನು ನೋಂದಾಯಿಸಿಕೊಂಡು ಅದಕ್ಕೆಂದೇ ಇರುವ ಯುನೀಕ್ ಐಡೆಂಟಿಫಿಕೇಶನ್ ನಂಬರ್ (UIN) ಹೊಂದಿರಬೇಕು.
- ವಿದೇಶೀಯರು ಭಾರತದಲ್ಲಿ ಡ್ರೋನ್ ಹಾರಿಸುವಂತಿಲ್ಲ. ತೀರಾ ಅಗತ್ಯವಿದ್ದರೆ, ಸ್ಥಳೀಯ ಡ್ರೋನ್‌ಗಳನ್ನು ಬಾಡಿಗೆಗೆ ಪಡೆದು ಹಾರಿಸಬಹುದು.
- 'ಹಾರಾಟ ನಿಷೇಧ'ವಿರುವ ಜಾಗಗಳಲ್ಲಿ, ವಿಮಾನ ನಿಲ್ದಾಣ, ಅಂತರರಾಷ್ಟ್ರೀಯ ಗಡಿ, ದೆಹಲಿಯ ವಿಜಯ್ ಚಾಕ್, ರಾಜ್ಯದ ರಾಜಧಾನಿಯ ಆಡಳಿತ ಭವನಗಳು, ರಡಾರ್ ಸ್ಟೇಷನ್, ಸಂಶೋಧನಾ ಸಂಸ್ಥೆಗಳ ಬಳಿ ಡ್ರೋನ್ ಹಾರಿಸಲು ನಿಷೇಧವಿದೆ.
- ಡ್ರೋನ್ ಹಾರಿಸುವವರು, ಹಾರಿಸುವಷ್ಟೂ ಸಮಯ ಡ್ರೋನ್ ಅನ್ನು ಕಣ್ಣಳತೆಯಲ್ಲಿರುವಂತೆ ನೋಡಿಕೊಳ್ಳಬೇಕು. 400 ಅಡಿಗಿಂತ ಮೇಲೆ ಹಾರಿಸುವಂತಿಲ್ಲ.
- ನಿಷೇಧಿತ ಅಥವಾ ಅಧೀನಕ್ಕೊಳಪಟ್ಟಿರುವ ವಲಯಗಳಲ್ಲಿ ಡ್ರೋನ್ ಹಾರಿಸಲು ಏರ್‌ಡಿಫೆನ್ಸ್ ಕ್ಲಿಯರೆನ್ಸ್ (ADC)

ಇಂಟಲಿಜೆನ್ಸ್, ಆರ್ಟಿಫಿಶಿಯಲ್ ರಿಯಾಲಿಟಿ, ವರ್ಚುವಲ್ ರಿಯಾಲಿಟಿ, 3ಡಿ ಮಾಡೆಲಿಂಗ್‌ನಂತಹ ತಂತ್ರಜ್ಞಾನಗಳನ್ನು ಬಳಸಿಕೊಂಡು ಗಟ್ಟಿಯಾಗಿ ನೆಲೆಯೂರಬೇಕಾಗಿದೆ. 2023ರ ವೇಳೆಗೆ ಡ್ರೋನ್ ತಂತ್ರಜ್ಞಾನದ ವಹಿವಾಟು ಶೇ. 18ರಷ್ಟು ಹೆಚ್ಚಲಿದೆ ಎಂದು '6w ರಿಸರ್ಚ್ ಸಂಸ್ಥೆ' ವರದಿ ನೀಡಿದೆ.

### ಅಪಾಯಕಾರಿ ಡ್ರೋನ್‌ಗಳು

ಡ್ರೋನ್‌ಗಳಿಂದ ಇರುವ ಅನುಕೂಲಗಳಷ್ಟೇ ಅನನುಕೂಲಗಳೂ ಇವೆ. ಬಹುಪಾಲು ಡ್ರೋನ್‌ಗಳು ಎನ್‌ಕ್ರಿಪ್ಟ್ ಆಗದ ಅಥವಾ ಅತೀ ಕಡಿಮೆ ಶಕ್ತಿಯ ದತ್ತಾಂಶ ಲಿಂಕ್‌ಗಳ ಮೇಲೆ ಕೆಲಸಮಾಡುತ್ತವೆ. ಅವುಗಳನ್ನು ಯಾರು ಬೇಕಾದರೂ ನಿಯಂತ್ರಿಸಬಹುದಾಗಿದೆ. ಹಾಗಾಗಿ ದೇಶದ್ರೋಹಿಗಳು, ಭಯೋತ್ಪಾದಕರ ಕೈಗೆ ಇವು ಸುಲಭವಾಗಿ ಸಿಗುವ ಸಾಧ್ಯತೆಗಳಿವೆ.

ಮನುಷ್ಯನ ನಿಯಂತ್ರಣದಲ್ಲಿರುವ ಅನೇಕ ಯಂತ್ರಗಳಿಗೆ, ಸೈಬರ್ ಸೆಕ್ಯೂರಿಟಿಯ ಕೊರತೆ ಇದೆ. ಹಾರುವ ಪ್ರತೀ ಡ್ರೋನ್ ಸಹ ಭೂಮಿಯ ಮೇಲಿನ ಬೇರೊಂದು ವಸ್ತುವಿನೊಂದಿಗೆ ತರಂಗ ಭಾಷೆಯಲ್ಲಿ, ಸಿಗ್ನಲ್ ರೂಪದಲ್ಲಿ ಕನೆಕ್ಟ್ ಆಗಿರುತ್ತದೆ. ಹಲವು ಮಾಹಿತಿ ವರ್ಗಾವಣೆಯೂ ಆಗುತ್ತದೆ. ಮಾಹಿತಿಗೂ ಸೋರಿಕೆಗೂ ಅವಿನಾಭಾವ ಸಂಬಂಧವಿದೆ. ಇಲ್ಲಿಯೇ ತುಸು ಜಾಗ್ರತೆ ವಹಿಸಬೇಕಾಗಿದೆ. 'ನನ್ನ ಮನೆಯ ಮೇಲೆ ಹಾರಿತ್ತು', 'ನನ್ನನ್ನು ಹಿಂಬಾಲಿಸುತ್ತಿತ್ತು', 'ನನ್ನ ಖಾಸಗೀತನಕ್ಕೆ ಧಕ್ಕೆಯಾಗಿದೆ' ಎಂದೆಲ್ಲ ದೂರುಗಳಿವೆ ಎಂದು ಸೈಬರ್ ಸೆಕ್ಯೂರಿಟಿ ಸೆಲ್‌ನ ಅಧಿಕಾರಿಗಳು ಹೇಳುವುದು ಸಾಮಾನ್ಯವಾಗಿದೆ. ಕಳೆದ ಸೆಪ್ಟೆಂಬರ್ 14ರಂದು ಯೆಮನ್‌ನ ಹೌಥೀ ಬಂಡುಕೋರರು ಕಡಿಮೆ ಬೆಲೆಯ 18 ಡ್ರೋನ್ ಬಳಸಿ ಸೌದಿ ಅರೇಬಿಯಾದ ತೈಲಬಾವಿಗಳ ಮೇಲೆ ಆಕ್ರಮಣ ನಡೆಸಿ, ಅಲ್ಲಿನ ಅರ್ಧದಷ್ಟು ಬಾವಿಗಳಿಗೆ ಬೆಂಕಿ ಇಟ್ಟಿದ್ದರು. ಬಹುತೇಕ ತೈಲ ಬಾವಿಗಳು ಉರಿದುಹೋಗಿ ಕಚ್ಚಾ ತೈಲದ ಬೆಲೆ ಶೇ.10ತರಷ್ಟು ದಿಢೀರ್ ಏರಿಕೆಯಾಗಿತ್ತು.

ಡ್ರೋನ್‌ಗಳು ತಾವಾಗಿಯೇ ನಿಯಂತ್ರಣ ತಪ್ಪಿ ಹಲವು ದುರ್ಘಟನೆಗೆ ಕಾರಣವಾಗಿವೆ. ಒಂದು ಲೆಕ್ಕಾಚಾರದ ಪ್ರಕರ ಶೇ.64ರಷ್ಟು ಡ್ರೋನ್‌ಗಳು ಹಾರುತ್ತಿರುವಾಗ, ಶೇ. 20ರಷ್ಟು ಇಳಿಯುವಾಗ ಮತ್ತು ಶೇ. 8ರಷ್ಟು ಹಾರುವಾಗ ಅಪಘಾತಕ್ಕೀಡಾಗುತ್ತವೆ.

### ಡ್ರೋನ್ ಅವಘಡಗಳ ಸಾಲು

- 2016ರಲ್ಲಿ ಲಾಸ್ ಏಂಜಲೀಸ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರವೇಶಿಸುತ್ತಿದ್ದ ಏರ್‌ಬಸ್ 380ರ ತೀರಾ ಹತ್ತಿರ ಬಂದಿದ್ದ ಡ್ರೋನ್ ಭಾರೀ ಆತಂಕ ಸೃಷ್ಟಿಸಿತ್ತು.
- ಆಸ್ಟ್ರೇಲಿಯಾದಲ್ಲಿ ಕ್ರೀಡಾ ಚಟುವಟಿಕೆಯನ್ನು ಚಿತ್ರೀಕರಿಸುತ್ತಿದ್ದ ಡ್ರೋನ್ ಓಟಗಾರನ ಮೇಲೆ ಬಿದ್ದು ತೀವ್ರವಾಗಿ ಗಾಯಗೊಳಿಸಿತ್ತು.
- 2018ರಲ್ಲಿ ಸಂಬಂಧಿಕರ ಮಗುವೊಂದು ಹಾರಿಸಿದ್ದ ನ್ಯಾನೋ ಡ್ರೋನ್ ಹದಿನೆಂಟು ತಿಂಗಳ ಮಗುವಿನ ಕಣ್ಣಿಗೆ ಬಡಿದು ಮಗು ಶಾಶ್ವತವಾಗಿ ದೃಷ್ಟಿ ಕಳೆದುಕೊಂಡಿತು.
- 2018ರ ಡಿಸೆಂಬರ್‌ನಲ್ಲಿ ಲಂಡನ್ನಿನ

